(Sri B. G. Banakar)

12.	North Kanara	Karwar, Bhatkal, Haliyal, Honavar, Kumta, Sirsi, and Siddapur.
13.	South Kanara	Mangalore, Buntwal, Coondapur. Karkal, Puttur and Udipi.
14.	Kolar	Kolar, Chickballapur, K. G. F. (Bangarpet), Chintamani.
15.	Mandya	Mandya, Srirangapatna and Krishnarajpet.
16.	Mysore	Mysore, Chamarajanagar, Hunsur, K.R.Nagar Kollegal. Nanjangud and T. Narasipur.
17.	Raichur	Raichur, Deodurg, Gangavathi, Koppal, Kushtagi, Lingasugur, Manvi, Sindhnoor, and Yelburga.
18.	Shimoga	Shimoga, Bhadravathi, Sagar and Shikaripur.
19.	Tumkur	Tumkur, Kunigal, Madhugiri, Tiptur, and Pavagada.

ಚಿಕ್ಕಮಗಳೂರು ತಾಲೂಕಿನಲ್ಲಿ ವಿಜುವಳ್ಳಿಯ ಹತ್ತಿರದ ಬಿರಂಜಿವಳ್ಳಕ್ಕೆ ಸೇತುವೆ ನಿರ್ಮಿಸುವುದು

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

೫೩. (ಬಿ) — ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ತಾಲ್ಲೂಕು ಪಸ್ತಾರೆ ಹೋಬಳಿ, ವಿಜುವಳ್ಳಿ, ಹತ್ತಿರ ಬಿರಂಜಿವಳ್ಳಕ್ಕೆ ಅಡ ಲಾಗಿ ಸೇತುವೆ ನಿರ್ಮಿಸಿದರೆ, ಹಚ್ಚಡಮನೆ, ವಾಟಗಾನಹಳ್ಳಿ, ಕೆಳಗದ್ರು, ನೆರಡಿ, ಬಸಗಲೆ, ದೊಡ್ಡನ ಗುಡ್ಡ, ಸುಸೆ ಬೀಕನಹಳ್ಳಿ, ಹಾಂದಿ, ಮೊದಲಾದ ಗ್ರಾಮಗಳಿಗೂ ತೊಂಡವಳ್ಳಿ, ವಳಗೇರಳ್ಳಿ, ನಂದೀಕೆರೆ, ಆರೇನಳ್ಳಿ, ಶಿರವಳಲು, ಹಲಸುಮನೆ, ತಡಗಸೆ, ಇರ್ಮುನಮನೆ, ತಿರಗಣಿ ಮೊದಲಾದ ಗ್ರಾಮಂಗಳಿಗೂ ಸಂಚಾರಕ್ಕೆ ಅನುಕೂಲವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದಲ್ಲಿ, ಈ ಸೇತುವೆ ನಿರ್ಮಾಣದ ಬಗ್ಗೆ ವಿವರಗಳೇನೆಂಬುದನ್ನು ತಿಳಿಸುವಿರಾ ?

ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು (ಶ್ರೀ ಹೆಚ್. ಎಂ. ಚನ್ನಬಸಪ್ಪ).—

ಉತ್ತರ .— (ಅ) ಇಲ್ಲ.

(ಆ) ಮೇಲೆ ನೀಡಿದ ಉತ್ತರದಿಂದಾಗಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೂಡಿಗೆರೆ ತಾಲೂಕಿನ ಹಳ್ಳಿಗಳ ವಿದ್ಯುದೀಕರಣ

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—

೫೪. (ಬಿ).— ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಂಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ತ್ರಿಪುರ ಪಂಚಾಯಿತಿಯ ಒಂದು ಗ್ರಾಮಕ್ಕೂ ವಿದ್ಯುಶಕ್ತಿ ಒದಗಿಸಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಈ ಮೇಲ್ಕಂಡ ಪಂಚಾಯಿತಿಗೆ ಸೇರಿದ ಗ್ರಾಮಗಳಿಗೆ ವಿದ್ಯುಶಕ್ತಿ ಒದಗಿಸಲು ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ;

(ಇ) ಮೂಡಿಗೆರೆ ತಾಲೂಕು, ಈ ಮೇಲ್ಕಂಡ ತ್ರಿಪುರ ಪಂಚಾಯಿತಿಗೆ ಸೇರಿದ ಹ್ಯಾರೆಗಂಡ್ಡಿ, ಪಟ್ಟ ದೂರು, ಜೆಸನ, ತ್ರಿಪುರ, ಹೆಸಗೋಡು, ಕೊಟ್ರಕೆರೆ, ಗುಂತ್ರಿಕೋಗಿಲೆ ಮತ್ತು ಮೂಲರಹಳ್ಳಿ ಗ್ರಾಮಂಗಳಿಗೆ ವಿದ್ಯುಶಕ್ತಿ ಅವಶ್ಯಕವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದರೆ, ಈ ಬಗ್ಗೆ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ ?

ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು (ಶ್ರೀ ಎಚ್. ಎಂ. ಚನ್ನಬಸಪ್ಪ).—

ಉತ್ತರ.— (ಅ) ಬಂದಿದೆ.

(ಆ) ಗ್ರಾಮಾಂತರ ವಿದ್ಯುತ್ತೀಕರಣವನ್ನು ತಾಂತ್ರಿಕ ಸಾಧ್ಯತೆ, ಪ್ರಮುಖ ವಿದ್ಯುತ್ ಮಾರ್ಗದಿಂದ ಗ್ರಾಮವು ಹತ್ತಿರವಿರುವುದು, ಆರ್ಥಿಕ ದೃಷ್ಟಿ ಮುಂತಾದ ಆಧಾರಗಳ ಮೇಲೆ ಕೈಕೊಳ್ಳಲಾಗುತ್ತದೆ. ಇದು ಬೃಹದಾಕಾರದ ಸಮಸ್ಯೆಯಾಗಿದ್ದು ಇದನ್ನು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರ ಸಂಪನ್ನೂಲಕ್ಕೊಳಪಟ್ಟು ವಿದ್ಯುತ್ತೀಕರಣವನ್ನು ಹಂತ ಹಂತವಾಗಿ ಕೈಕೊಳ್ಳಬೇಕಾಗಿದೆ. ಸದರಿ ಗ್ರಾಮಗಳ ಸಮೀಕ್ಷೆಯು ಮೇಲ್ಕಂಡ ಪರತ್ತುಗಳನ್ನು ಪೂರೈಸಿದ್ದಲ್ಲಿ ಅವುಗಳಿಗೆ ವಿದ್ಯುತ್ ಉಪಮಾರ್ಗಗಳನ್ನು ನಿರ್ಮಿಸುವ ಮೂಲಕ ಅಲ್ಲಿ ವಿದ್ಯುಚ್ಛಕ್ತಿ ಪೂರೈಸಲಾಗುತ್ತಿದೆ.

(ಇ) ಬಂದಿದೆ.

(ಈ) ಪ್ರಶ್ನೆಯ (ಅ) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

HEALTH UNIT AT GOJARKOT IN GURMITKAL CONSITUENCY

SRI MALLIKARJUNA KHARGE (Gurmitkal).—

55. (68) Will the Minister for Helth be pleased to state :—

(*a*) whether there is any proposal to establish a health unit at village Gojarkot in Gurmitkal Constituency ;

(*b*) if not, the reasons for the same ?

SRI H. SIDDAVEERAPPA (Minister for Health).—

(*a*) No.

(*b*) There is no request either from the Local Bodies or from the Public for sanction of a Health Unit type Dispensary at Gojarkot in Gurmitkal Constituency,

APPROACH ROADS IN GURMITKAL CONSTITUENCY

SRI MALLIKARJUNA KHARGE (Gurmitkal).—

56. (69) Will the Minister for Public Works and Electricity be pleased to state :—

(*a*) the number of villages which have no approach roads in Gurmitkal Constituency ;

(*b*) the number of approach roads proposed to be constructed in Gurmitkal Constituency during the year 1972-73 ?

SRI H. M. CHANNABASAPPA (Minister for Public Works and Electricity).

(*a*) Fifty-six.

(*b*) Depends upon the availability of funds.

ಮೂಡಿಗೆರೆ ತಾಲೂಕಿನ ಬಿಳಗಲಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ದುರಸ್ತಿ